ಅನ್ನೋದು ಅವರಿಗೆ ಚೆನ್ನಾಗಿ ಗೊತ್ತು. ನೀವು ಇದನ್ನೆಲ್ಲ ಇಷ್ಟು ಮನಸ್ಸಿಗೆ ತೆಗೆದುಕೊಂಡರೆ ಹೇಗೆ? ನೀವು ಎಷ್ಟು ಜನ ಮಂತ್ರಿಗಳನ್ನ ನೋಡಿದ್ದೀರಿ, ನಿಮ್ಮ ಸರ್ವಿಸ್‌ನಲ್ಲಿ'' ಎಂದು ತಮ್ಮ ಎರಡು ಕೈಗಳಿಂದ ವೆಂಕಟ್ ಅವರ ಕೈ ಹಿಡಿದರು.

''ಹ್ಞು ಸರ್, ಈ ನನ್ನ ವಾಚಿಲ್ಲದ ಬರಿಗೈ, ಅವರು ಹೇಳಿದ ಕಥೆಯ ಸತ್ಯಕ್ಕೆ ಸಾಕ್ಷಿ. ಆವತ್ತು ಅವರನ್ನ ಕಳ್ಳ ಅಂತ ಅನುಮಾನ ಪಟ್ಟಿದ್ದು...'' ಎಂದು ಸ್ವಲ್ಪ ತಡೆದು, ''ನಾನೇ'' ಎಂದರು. ''ಆವತ್ತಿನಿಂದ ಇವತ್ತಿನವರೆಗೂ ನಾನು ವಾಚು ತೊಟ್ಟಿಲ್ಲ'' ಎನ್ನುವಾಗ ಅವರ ಧ್ವನಿ ಗಂಟಲಲ್ಲೇ ಕುಗ್ಗಿಹೋಗಿತ್ತು.

''ನಿಜವಾಗಲೂ...'' ಎಂದು ಆಶ್ಚರ್ಯ ಚಕಿತರಾಗಿ, ''ಹೇಗೆ ಸರ್'' ಎಂದರು ಸುಬ್ಬು.

ವೆಂಕಟ್ ಅವರು ಎಂದಿನ ಮೆಲುದನಿಯಲ್ಲಿ, ''ಆಗ ನಾನು ತರಗುಪೇಟೆಯ ಒಂದು ಮಂಡಿಯಲ್ಲಿ ಕೆಲಸ ಮಾಡುತ್ತಿದ್ದೆ. ಮಂಡಿಯ ಶೆಟ್ಟರಿಗೆ ಇಸ್ಪೀಟು ಆಟದ ಹುಚ್ಚು. ಆದ್ದರಿಂದ ಒಂದೊಂದು ಸಲ ಅವರು ಹಾಕಿಕೊಂಡಿರೋ ಚೈನು, ವಾಚು ಎಲ್ಲ ಮನೆಗೆ ಕೊಟ್ಟು ಕಳುಹಿಸಿಬಿಡುತ್ತಿದ್ದರು. ಆಟದ ಬಿಸಿಯಲ್ಲಿ ಅವನ್ನು ಅಡವು ಇಡುವ ಸಂದರ್ಭ ಬರದೇ ಇರಲಿ ಅಂತ ಅವರೇ ಮಾಡಿಕೊಂಡಿದ್ದ ನಿಯಮ ಅದು. ಆವತ್ತು ಕೂಡ ನನ್ನ ಕೈಲಿ ಅವರ ಉಂಗುರ ವಾಚು, ಚಿನ್ನದ ಚೈನು ಮತ್ತು ಗಲ್ಲಾ ಪೆಟ್ಟಿಗೆಯಿಂದ ನೂರು ರೂಪಾಯಿ ತೆಗೆದುಕೊಟ್ಟು ಮನೆಗೆ ತಲುಪಿಸಿಬಿಡು ಎಂದು ಹೇಳಿ ಅವರು ಹೋದರು. ಅಂಗಡಿ ಬಾಗಿಲು ಹಾಕಿಸಿ, ಬೀಗದ ಕೈಯನ್ನು ವಾಚು ಚೈನು ಇದ್ದ ಸಂಚಿಯಲ್ಲಿ ಹಾಕಿಕೊಂಡೆ. ಸದಾ ಶೆಟ್ಟರ ಕೈಯಲ್ಲಿ ಇರುತ್ತಿದ್ದ ರೋಲೆಕ್ಸ್ ವಾಚು ನನ್ನನ್ನು ಆಕರ್ಷಿಸಿತ್ತು. ಹೇಗಿದ್ದರೂ ಮನೆಗೆ ಕೊಡಬೇಕು, ಸಂಚಿಯಲ್ಲಿ ಇಟ್ಟುಕೊಳ್ಳೋ ಬದಲು ಕೈಯಲ್ಲಿ ಇರಲಿ ಅಂತ ವಾಚು ಹಾಕಿಕೊಂಡೆ. ವಾಚು ಫಳ ಫಳ ಹೊಳೀತಿತ್ತು. ಹಾಕಿಕೊಂಡು ನಡೀತಿದ್ದರೆ ಅದೇನೋ ಆನಂದ. ಸ್ವಲ್ಪ ದುಡ್ಡು ಬಂದ ಮೇಲೆ ಇಂತಹದ್ದೇ ಒಂದು ನಾನು ತೆಗೆದುಕೊಳ್ಳಬೇಕು ಅಂತ ಕನಸು ಕಾಣುತ್ತ, ಸಿಟಿ ಮಾರ್ಕೆಟ್ ಕಡೆಗೆ ನಡೆಯತೊಡಗಿದೆ. ತರಗುಪೇಟೆಯಿಂದ ಬಸ್‌ಸ್ಟಾಪಿಗೆ ಅಬ್ಬಬ್ಬಾ ಅಂದರೆ ಹತ್ತು ನಿಮಿಷದ ದಾರಿ. ಆವತ್ತು ಹೂವಿನ ಹಾರ ಮಾರುತಿದ್ದ ಆ ದಪ್ಪ ಹೆಂಗಸು, ಹಣ್ಣು ಮಾರುತ್ತಿದ್ದ ಆ ಟೋಪಿವಾಲ, ಪಕ್ಕದ ಹಳ್ಳದಿಂದ ಪಿಚಕ್ ಪಿಚಕ್ ಎಂದು ಹವಾಯ್ ಚಪ್ಪಲಿಯಿಂದ ಕೆಸರನ್ನು ಹಾರಿಸಿಕೊಂಡು ಓಡಿದ ಆ ಹುಡುಗರು, ಏನೇ ತೊಗೋಳಿ ಬರೇ ಎಂಟಾಣೆ ಎಂದು ಹಿಂದೆ ಹಿಂದೆ ಬರುತ್ತಿದ ಸಾಬಿ, ಇಲಿ ಪಾಷಾಣ ಬೇಕಾ ತೊಗೋಳಿ ಗ್ಯಾರಂಟಿ ಮಾಲು, ಬೇಕಾದ್ರೆ ಟೇಸ್ಟ್ ಮಾಡಿ ನೋಡಿ ಸರ್ ಎಂದು ಕಿಚಾಯಿಸುತ್ತಿದ್ದ ಕೊಳಕು ಲುಂಗಿ ತೊಟ್ಟಿದ್ದ ಪೋಕರಿ, ಎಲ್ಲರೂ ನನ್ನನ್ನೇ, ನನ್ನ ವಾಚನ್ನೇ ನೋಡುತ್ತಿದ್ದಾರೆ, ಅದನ್ನ ಎಗರಿಸೋಕೆ ಹೊಂಚು ಹಾಕುತ್ತಿದ್ದಾರೆ ಅನ್ನಿಸುತ್ತಿತ್ತು. ಅಜ್ಜ ಹೇಳೋ ಮಾಂತ್ರಿಕನ ಪ್ರಾಣ ಸಪ್ತ ಸಾಗರದಾಚೆ, ಮೊಸಳೆಗಳು ತುಂಬಿದ ಕೆರೆ ದಾಟಿ, ಕೆಂಡದ ದಾರಿ ಹಾರಿ, ಭೂತಗಳು ಕಾಯುವ ಕೋಟೆ ಭೇದಿಸಿ, ಮಾಳಿಗೆಯಲ್ಲಿ ಸಣ್ಣ ಪಂಜರದಲ್ಲಿ ಇರುವ ಆ ಗಿಳೀಲಿ ಇರುವ ಹಾಗೆ ಆ ದಿನ ನನ್ನ ಮಾನ ಪ್ರಾಣ ಎರಡೂ ವಾಚು ಮತ್ತು ಬ್ಯಾಗಿನಲ್ಲಿತ್ತು.

ಮೊದಲೇ ದಿಗಿಲು ಬಿದ್ದೋನಿಗೆ ಭೂತದ ದರ್ಶನ ಅನ್ನೋ ಹಾಗೆ ಈ ನಮ್ಮ ಸಾಹೇಬ್ರು ತಗಲಾಕಿಕೊಂಡರು. ಆಗ ಸಾಹೇಬರು ತೆಳ್ಳಗೆ ತುಂಬಾ ಸಣಕಲಾಗಿದ್ದರು. ಕುರುಚಲು ಗಡ್ಡ, ಕೋಲುಮುಖ; ಈಗಿನ ಹಾಗಲ್ಲ. ಸುಮ್ಮನೆ ಮೈಮೇಲೆ ಬಿದ್ದು ಮಾತಾಡಿಸೋಕೆ ಬರುತ್ತಿದ್ದರು. ಎಷ್ಟು ನಿರ್ಲಕ್ಷ್ಯ ಮಾಡಿದರೂ ಮತ್ತೆ ಮತ್ತೆ ಮಾತಾಡಿಸೋದು, 'ಬಸ್ಸು ಎಷ್ಟೊತ್ತಿಗೆ ಬರುತ್ತೆ?' ಕೇಳಿದರು. ನನಗೇನು ಗೊತ್ತು, ಬಿಟಿಎಸ್ ನಮ್ಮ ಮಾವನದ್ದ ಅಂತ ಹೇಳಬೇಕು ಅನ್ನಿಸಿದರೂ ಗೊತ್ತಿಲ್ಲ ಎಂದೆ. 'ಮತ್ತೆ ನೀವು ಎಲ್ಲಿಗೆ ಹೋಗ್ತಾ ಇದ್ದೀರಿ?' ಎಂದರು. ಅದೆಲ್ಲ ನಿಮಗ್ಯಾಕೆ ಅನ್ನಬೇಕು ಅನ್ನಿಸಿದರೂ ಹನುಮಂತ ನಗರ ಎಂದೆ. ಈ ಹಾಳಾದ ಬಸ್ಸು ತುಂಬಾ ಜನ, ವಾಚು ತೆಗೆದು ಚೀಲದಲ್ಲಿ ಹಾಕಿಕೊಂಡು ಬಿಡಲೇ ಎಂದು ಅನ್ನಿಸಿದರೂ ಇಂತಹ ಸ್ಥಳದಲ್ಲಿ ಚೀಲ ತೆಗೆದರೆ, ಅದರಲ್ಲಿ ಇರುವ